ಹೇಳಿದ್ದೇನೆ. ಹಾಗೆಯೇ ಏಪ್ರಿಲ್ ತಿಂಗಳಲ್ಲಿ ಒಂದು ಐದು ನಿಮಿಷಗಳ ಕಾಲ ಮಳೆ ಬಂದರೆ ಎಲ್ಲಾ ಕಡೆಗಳಲ್ಲಿಯೂ ನೀರು ತುಂಬಿಹೋಗುತ್ತದೆ ಏಕೆಂದರೆ ಪಶ್ಚಿಮ ಘಟ್ಟದ ಮೇಲುಗಡೆ. ಇರುವಂತಹ ಪ್ರದೇಶ ಇದು. ಆದುದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಆತಂಕವನ್ನು ಪಡಬೇಕಾಗಿಲ್ಲ. ನೀರಿನ ತೊಂದರೆಯಾದಲ್ಲಿ ಕೊಳವೆಬಾವಿಗಳನ್ನು ಹಾಕಿಸಿಕೊಡುತ್ತೇವೆ. ಇವರು ಈ ವಿಷಯದಲ್ಲಿ ಸಂಶಯವನ್ನು ಪಡಬೇಕಾಗಿಲ್ಲ. ಮಾನ್ಯ ಮಂತ್ರಿಯವರು ಉದಾಸೀನ ತಾಳಿದ್ದಾರೆಂದು ಅವರು ತಿಳಿದು ಕೊಳ್ಳಬೇಕಾಗಿಯೂ ಇಲ್ಲ.

ಬೆಂಗಳೂರು ನಗರ ಸಾರಿಗೆ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸಿನ ಬಣ್ಣ ಬದಲಾವಣೆ ಬಗ್ಗೆ.

೩೨೬. ಶ್ರೀ ಜಿ.ಎಂ. ಕಾನಡೆ (ಸಿರ್ಸಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರ ಸಾರಿಗೆ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸಿನ ಬಣ್ಣ ಬದಲಾವಣೆ ಮಾಡುವುದು ನಿಜವೇ?

ಆ) ರಾಜ್ಯದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಮತ್ತು ಬೆಂಗಳೂರು ನಗರ ಸಾರಿಗೆ ಬಸ್ಸುಗಳ ಒಟ್ಟು ಸಂಖ್ಯೆ ಎಷ್ಟು?

ಇ) ಹಾಗಿದ್ದಲ್ಲಿ ಬಣ್ಣ ಬದಲು ಮಾಡುವುದು ಇದ್ದರೆ ಒಂದು ಬಸ್ಸಿಗೆ ಎಷ್ಟು ಖರ್ಚಾಗಬಹುದು ಹಾಗೂ ಒಟ್ಟು ಬಸ್ಸುಗಳಿಗೆ ಆಗುವ ಖರ್ಚೆಷ್ಟು? ಮತ್ತು ಯಾವ ಬಣ್ಣವನ್ನು ಬಳಿಸಲಾಗುವುದು?

ಈ) ಬಸ್ಸಿನ ದರ ಜಾಸ್ತಿ ಮಾಡಿದ ನಂತರ ಸಂಸ್ಥೆಗೆ ಆದ ಲಾಭ ಎಷ್ಟು? ಹಾಗೂ ದರ ಕಡಿಮೆ ಮಾಡಲು ಕೈಗೊಂಡ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಮಾನ್ಯ ಸಾರಿಗೆ ರಾಜ್ಯ ಸಚಿವರು).—

ಅ) ಇಲ್ಲ.

ಆ) ಬೆಂಗಳೂರು ನಗರ ಸಾರಿಗೆ ವಿಭಾಗವು ೧೨೮೯ ವಾಹನಗಳನ್ನು ಹೊಂದಿದ್ದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಟ್ಟು ೭೧೨೦ ವಾಹನಗಳನ್ನು ಹೊಂದಿದೆ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಸಂಸ್ಥೆಯು ೧೯೮೫ನೇ ಡಿಸೆಂಬರ್ ವರೆಗೆ ಲಾಭ ಗಳಿಸಿರುವುದಿಲ್ಲ. ಆದರೂ ಆಗುತ್ತಿರುವ ನಷ್ಟವನ್ನು ಕಡಿಮೆಗೊಳಿಸಲಾಗಿದೆ. ಆದಾಗ್ಯೂ ಆದಾಯವು ತಿಂಗಳಿಗೆ ೩ ಕೋಟಿ ರೂ.ಗಳಷ್ಟು ಹೆಚ್ಚಾಗಿದೆ, ಸಂಸ್ಥೆಯ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಲ್ಲದ್ದರಿಂದ ಪ್ರಯಾಣ ದರ ಕಡಿಮೆ ಮಾಡಲು ಉದ್ದೇಶಿಸಿಲ್ಲ.

ಶ್ರೀ ಗೋಪಾಲ ಮಯ್ಯ ಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಬರಗಾಲ ಬಿದ್ದಂತಹ ಪ್ರದೇಶಗಳಲ್ಲಾದರೂ ಈ ಬಸ್ಸಿನ ದರವನ್ನು ಕಡಿಮೆ ಮಾಡುವ ಯೋಚನೆ ಸರಕಾರಕ್ಕಿದೆಯೆ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಬಸ್ಸಿನ ದರವನ್ನು ಕಡಿಮೆ ಮಾಡುವುದು ಸಾಧ್ಯವಾಗುವುದಿಲ್ಲ ಸ್ವಾಮಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪುರಸಭೆಗಳಿಗೆ ಅಕ್ಟ್ರಾಯಿ ಅನುದಾನ ನೀಡುವುದು.

೩೧೩. ಶ್ರೀ ಎನ್.ಎಂ. ಅಡ್ಯಂತಾಯ (ಸುರತ್‌ಕಲ್).—ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದವರು ಅಕ್ಟ್ರಾಯಿ ರದ್ದು ಮಾಡಿದ ನಂತರ ಈ ಆದಾಯದ ಪೂರಕವಾಗಿ ನೀಡಬೇಕಾಗಿದ್ದ ಅನುದಾನವನ್ನು ಎಷ್ಟು ಪುರಸಭೆಗಳಿಗೆ ನೀಡಿದೆ ಹಾಗೂ ನೀಡಿದ ಹಣದ ಮೊತ್ತವೆಷ್ಟು?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪುರಸಭೆಗಳಿ ಈ ಅನುದಾನ ನೀಡಲಾಗಿದೆ?

ಆ) ಹಾಗಿಲ್ಲದಿದ್ದಲ್ಲಿ ಯಾವಾಗ ಈ ಅನುದಾನ ನೀಡಲಾಗುವುದು?

ಈ) ವೃತ್ತಿ ತೆರಿಗೆಯ ಹಣದಿಂದ ದಕ್ಷಿಣ ಕನ್ನಡ ಜಿಲ್ಲೆಯ ಸುರತ್‌ಕಲ್ ಪುರಸಭೆಗೆ ನೀಡಿದ ಅನುದಾನವೆಷ್ಟು?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ೬ ನಗರಪಾಲಿಕೆಗಳು, ೧೮೧ ನಗರ ಪುರಸಭೆಗಳು, ಒಂದು ಅಧಿಸೂಚಿತ ಪ್ರದೇಶಕ್ಕೆ ಆಕ್ಟ್ರಾಯಿ ಪರಿಹಾರ ಧನ ಕೊಡಲಾಗುತ್ತಿದೆ. ೨೭ ಪುರಸಭೆಗಳು ೧೨ ಅಧಿಸೂಚಿತ ಪ್ರದೇಶಗಳು ಮತ್ತು ಎರಡು ಸ್ಯಾನಿಟರಿ ಬೋರ್ಡ್ ಇವುಗಳಿಗೆ ಕೊಡುತ್ತಿಲ್ಲ.

ಪರಿಹಾರವನ್ನು ನೀಡಿರುವ ವಿವರಗಳು.

ವರ್ಷ	ರೂ.
೧೯೭೯–೮೦	೨೩,೬೦,೧೮,೯೦೦–೦೦
೧೯೮೦–೮೧	೨೨,೯೦,೯೯,೯೯೯–೦೦
೧೯೮೧–೮೨	೨೭,೮೭,೧೫,೧೬೮–೦೦
೧೯೮೨–೮೩	೩೧,೨೬,೬೪,೭೬೭–೦೦
೧೯೮೩–೮೪	೩೨,೧೯,೪೭,೦೬೩–೦೦
೧೯೮೪–೮೫	೩೫,೬೮,೨೬.೦೭೬–೦೦
೧೯೮೫–೮೬	೫೯,೦೨,೬೪,೧೮೫–೦೦ (ಈ ಸಾಲಿನ ಬಡ್ಜೆಟನಲ್ಲಿ ಅಳವಡಿಸಿದೆ. ಇದರಲ್ಲಿ ಎರಡು ಕಂತುಗಳ ಒಟ್ಟು ರೂ. ೧೯,೫೧,೩೪೪,೯೭೨ ಬಿಡುಗಡೆ ಮಾಡಲಾಗಿದೆ)

ಆ) ಮಂಗಳೂರು ಮಹಾನಗರ ಪಾಲಿಕೆಗೆ ಮಾತ್ರ.

ಇ) ಪುರಸಭೆಗಳು ಆಕ್ಟ್ರಾಯಿಯನ್ನು ವಿಧಿಸಂತ್ತಿರಲಿಲ್ಲವಾದಂದರಿಂದ, ಅದರ ರದ್ದಿನಿಂದ ಅವಕ್ಕೆ ನಷ್ಟವಾಗಿಲ್ಲ. ಆದುದರಿಂದ ಪರಿಹಾರ ನೀಡುವ ಪ್ರಶ್ನೆಯಿಲ್ಲ.

ಈ) ಸೂರತ್ಕಲ್ ಪುರಸಭೆಗೆ ವೃತ್ತಿ ತೆರಿಗೆಯಿಂದ ನೀಡಿರುವ ಪರಿಹಾರ.

Rs. 11,777-50 Per Annum/ವರ್ಷಕ್ಕೆ (Rs. 94,220 total from 1-4-1976 to 31-3-1984)

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳವರು ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆಯ ಮೊದಲ ಉಪಪ್ರಶ್ನೆಗೆ ಉತ್ತರಿಸುತ್ತಾ ೧೮೧ ಪುರಸಭೆಗಳಿಗೆ ಆಕ್ಟ್ರಾಯಿ ಪದ್ಧತಿಯ ಅನುದಾನವನ್ನು ನೀಡಿದ್ದಾರೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ, ಈ ಸಂದರ್ಭದಲ್ಲಿ ಸುಮಾರು ೨೭ ಪುರಸಭೆಗಳಿಗೆ ಅವುಗಳು ಆಕ್ಟ್ರಾಯಿ ವಿಧಿಸಂತ್ತಿಲ್ಲವಾದುದರಿಂದ ನಷ್ಟ ಆಗಿಲ್ಲ, ಆದುದರಿಂದ ಅವುಗಳಿಗೆ ಅನುದಾನವನ್ನು ಕೊಟ್ಟಿಲ್ಲ ಎಂಬಂತಹ ಒಂದು ಉತ್ತರವನ್ನು ಕೊಟ್ಟಿದ್ದಾರೆ. ನೈಜ ಸ್ಥಿತಿ ಎಂದರೆ, ಈ ೨೭ ಪುರಸಭೆಗಳೂ ಕೂಡಾ ಹಾಗೂ ಮಂಗಳೂರು ಮಹಾನಗರ ಸಭೆಯೂ ಕೂಡಾ ಆಕ್ಟ್ರಾಯಿಯನ್ನು ವಿಧಿಸಂವುದರ ಹಂತದಲ್ಲಿತ್ತು. ಉದಾಹರಣೆಗಾಗಿ ಕಾರ್ಕಳ ಪುರಸಭೆಯೂ ಕೂಡಾ ಈ ಕಾರ್ಯಕ್ರಮವನ್ನು ಹಾಕಿತ್ತು. ದುರದೃಷ್ಟವಶಾತ್ ಹೈಕೋರ್ಟ್ ನಿಂದ ಸ್ಟೇ ಕೊಟ್ಟಿರುವುದರಿಂದಾಗಿ ಆ ಸಂದರ್ಭದಲ್ಲಿ ಅವರು ಆಕ್ಟ್ರಾಯಿಯನ್ನು ವಿಧಿಸಲಿಕ್ಕೆ ಆಗಲಿಲ್ಲ. ಅದೇ ಸಂದರ್ಭದಲ್ಲಿ ಸರಕಾರ ಕೂಡ ಆಕ್ಟ್ರಾಯಿಯಂನ್ನು ರದ್ದು ಮಾಡಿದ್ದರಿಂದ ಈ ೨೭ ಪುರಸಭೆಗಳಿಗೆ

ಈ ಕಾರ್ಯಕ್ರಮವನ್ನು ಹಾಕಲಿಕ್ಕೆ ಆಗಲಿಲ್ಲ. ಅದ್ದರಿಂದ ೧೨೧ ಪುರಸಭೆಗಳಿಗೆ ಮತ್ತು ೫ ಮಹಾನಗರ ಪಾಲಿಕೆಗಳಿಗೆ ತಾವು ಅನುದಾನವನ್ನು ಕೊಡುತ್ತಿರುವಾಗ ಈ ಒಂದು ಮಹಾನಗರ ಪಾಲಿಕೆ, ಮತ್ತು ೨೭ ಪುರಸಭೆಗಳಿಗೆ ಇವೊತ್ತು ಕೊಡಾ ಖಂಡಿತಾ ನಷ್ಟ ಆಗುತ್ತದೆ. ಆದುದರಿಂದ ಈ ಪುರಸಭೆಗಳಿಗೆ ಮತ್ತು ನಗರಪಾಲಿಕೆಗೆ ಅನುದಾನವನ್ನು ಸರಕಾರದವರು ಕೊಡಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ ನಾನು ಉತ್ತರವನ್ನು ಓದುವಾಗ, ಒಂದು ತಪ್ಪು ಉತ್ತರವನ್ನು ಕೊಟ್ಟಿದ್ದೇನೆ. ಮಂಗಳೂರು ಮಹಾನಗರ ಪಾಲಿಕೆಗೆ ಅನುದಾನವನ್ನು ಕೊಡುತ್ತಾ ಇದ್ದೇವೆ. ಉಳಿದ ೨೭ ಪುರಸಭೆಗಳಿಗೆ ಕೊಡತಕ್ಕಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಆಕ್ಟ್ರಾಯಿ ರದ್ದಿಯಾತಿಯ ದಿನ ಅವುಗಳು ಆಕ್ಟ್ರಾಯಿ ಹಾಕುತ್ತಾ ಇರಲಿಲ್ಲ. ಆದುದರಿಂದ ಅವುಗಳಿಗೆ ಕೊಡತಕ್ಕಂತಹ ವಿಷಯ ಈಗ ಇಲ್ಲ.

ಶ್ರೀ ಎನ್.ಎಂ. ಅಡ್ಯಂತಾಯ.—ಅಧ್ಯಕ್ಷರೆ, ೧೨೧ ಪುರಸಭೆಗಳಿಗೆ ತಾವು ಅನುದಾನವನ್ನು ಕೊಡುತ್ತಾ ಇದ್ದೀರಿ ೨೭ ಪುರಸಭೆಗಳು ಕೂಡಾ ಆಕ್ಟ್ರಾಯನ್ನು ವಿಧಿಸುವ ಹಂತದಲ್ಲಿದ್ದವು ಆದುದರಿಂದ ದಯವಮಾಡಿ ಈ ವಿಷಯದ ಕುರಿತು ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ನಾನು ಮಾತನಾಡುವಾಗ ಒಂದು ತಪ್ಪು ಉತ್ತರ ಕೊಟ್ಟಿದ್ದೇನೆ. ಆದರೆ ಮಂಗಳೂರು ಮುನಿಸಿಪಾಲಿಟಿಗೆ ಅನುದಾನ ಕೊಡುತ್ತಿದ್ದೇವೆ. ಇನ್ನು ಉಳಿದ ೨೭ ಪುರಸಭೆಗಳಿಗೆ ಕೊಡತಕ್ಕಂಥ ಪ್ರಶ್ನೆ ಉದ್ಭವಿಸುವುದಿಲ್ಲ. ಆಕ್ಟ್ರಾಯ್ ರದ್ದಾದರೂ ಅನುದಾನ ಕೊಡುವಂತಹ ಅವಶ್ಯಕತೆ ಇಲ್ಲ.

ಶ್ರೀ ಎನ್.ಎಂ ಅಡ್ಯಂತಾಯ.— ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಈ ೨೭ ಪುರಸಭೆಗಳಿಗೂ ಅನುದಾನ ಕೊಡುವಂತೆ ಪರಿಶೀಲನೆ ಮಾಡಬೇಕು ?

SRI A. LAKSHMISAGAR.—This is not before the consideration of the Government. Further, if and when decision comes up, I will certainly keep this in mind.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಹಂಚಿನ ಉದ್ದಿಮೆಯ ಕಾರ್ಖಾನೆಯಲ್ಲಿನ ಕಾರ್ಮಿಕರ ಸಂಖ್ಯೆ

೩೩೪. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಚಿನ ಉದ್ದಿಮೆಯ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಈ ಕಾರ್ಮಿಕರ ತುಟ್ಟಿಭತ್ಯೆ ಸಮೇತ ಕನಿಷ್ಟ ವೇತನವನ್ನು ಘೋಷಿಸಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಅದನ್ನು ಯಾವಾಗ ಘೋಷಿಸಲಾಗುವುದು ಹಾಗೂ ಈ ವಿಳಂಬದಿಂದ ಕಾರ್ಮಿಕರಿಗೆ ಅನ್ಯಾಯವಾಗುವುದಿಲ್ಲವೇ ?

ಶ್ರೀ ಡಿ. ಮಂಜುನಾಥ (ಕಾರ್ಮಿಕ ಸಚಿವರು).—

ಅ) ಸುಮಾರು ೬೦೫೦ ಕಾರ್ಮಿಕರಿರುತ್ತಾರೆ.

ಆ) ಇಲ್ಲ.

ಇ) ಹೆಂಚಿನ ಕೈಗಾರಿಕೆಯಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕನಿಷ್ಟವೇತನವನ್ನು ತುಟ್ಟಿಭತ್ಯೆ ಸಮೇತ ಪುನರ್ವಿಮರ್ಶೆಗೊಳಿಸುವುದಕ್ಕೆ ಶೀಘ್ರದಲ್ಲಿಯೇ ಕರಡು ಪ್ರಸ್ತಾವನೆಯನ್ನು ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿದೆ. ಸದರಿ ಕರಡು ಪ್ರಸ್ತಾವನೆಯನ್ನು ಪ್ರಕಟಿಸಿದ